**ಅಂಗೀಕಾರ ಪ್ರಸ್ತಾವ**

**ಶ್ರೀ ಕೆ.ಜೆ.ಜಾರ್ಜ್ (ಗೃಹ ಇಲಾಖೆ)** : ಮಾನ್ಯ ಅಧ್ಯಕ್ಷರೆ, **2013 ನೇ ಸಾಲಿನ ಕರ್ನಾಟಕ**

**ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.**

**ಅಧ್ಯಕ್ಷರು** : ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

**2013ನೇ ಸಾಲಿನ ಕರ್ನಾಟಕ ಪೊಲೀಸು (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.**

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.**

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿತು)

**(ಅನುಬಂಧ–1)**

**ಅಧ್ಯಕ್ಷರು** : ಈಗ ಮಾನ್ಯ ಕೃಷಿ ಸಚಿವರು ಒಂದು ಹೇಳಿಕೆಯನ್ನು ನೀಡುತ್ತಾರೆ.

**11. ನಕಲಿ ರಸಗೊಬ್ಬರದ ಬಗ್ಗೆ ಕೃಷಿ ಸಚಿವರಿಂದ ಮುಂದುವರೆದ ಹೇಳಿಕೆ.**

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು)** : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸದನದಲ್ಲಿ ನಕಲಿ ರಸಗೊಬ್ಬರದ ಪ್ರಕರಣ ಪ್ರಸ್ತಾಪವಾಗಿತ್ತು. ಅದರ ಬಗ್ಗೆ ಅಂದು ಹೇಳಿಕೆಯನ್ನು ಮಾಡಿದ್ದೆ. ಅದರ ಮುಂದುವರೆದ ಒಂದು ಹೇಳಿಕೆಯನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಮಾಡಲಿಕ್ಕೆ ಬಯಸುತ್ತೇನೆ.

"ಆನಬಾಳು ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ" ಸಕಲೇಶಪುರ ತಾಲ್ಲೂಕಿನಲ್ಲಿ ಈ ನಕಲಿ ರಸಗೊಬ್ಬರ ಪತ್ತೆ ಆಗಿ ಅದರಲ್ಲಿ ಈಗಾಗಲೇ ಸದನಕ್ಕೆ ತಿಳಿಸಿದ ಹಾಗೆ ಅಶೋಕ ಎನ್ನುವ ಕಾರ್ಯದರ್ಶಿಯವರು ಮತ್ತು ಅನಧಿಕೃತ ಸರಬರಾಜುದಾರರಾದಂಥ ವಿಲನ್‌ಗೌಡವರು ಮತ್ತು ಅದೇ ರೀತಿಯಲ್ಲಿ ಆಲೂರಿನ ಶ್ರೀ ನಾಗಣ್ಣ, ಶ್ರೀ ಪಾಲಾಕ್ಷ ಅವರ ಮೇಲೆಯೂ ಕೇಸ್ ದಾಖಲಾಗಿ, ಅವರನ್ನು ಬಂಧಿಸಲಾಗಿದ್ದು, ಹಾಗೆಯೇ ಗುಬ್ಬಿ ತಾಲ್ಲೂಕಿನ ಮಲ್ಲಿಕಾರ್ಜುನ ಎನ್ನುವವರನ್ನೂ ಸಹ ಪೊಲೀಸರು ಬಂಧನಕ್ಕೆ ತೆಗೆದುಕೊಂಡು ತನಿಖೆಯನ್ನು ನಡೆಸಿದರು. ಅದು ಮುಂದುವರೆದು ಬೇಲೂರು ತಾಲ್ಲೂಕಿನ ಅನುಗಂಪ ಪ್ರಾಥಮಿಕ ಕೃಷಿ ಷತ್ತಿನ ಸಹಕಾರ ಸಂಘ ನಿಯಮಿತ, ಈ ಸಂಘದಲ್ಲಿಯೂ ಸಹ ಸುಮಾರು 146 ನಕಲಿ ರಸಗೊಬ್ಬರದ ಚೀಲಗಳನ್ನು ಇಲಾಖೆಯವರು ಪೊಲೀಸರ ಸಹಕಾರದಿಂದ ವಶಪಡಿಸಿಕೊಂಡಿರುತ್ತಾರೆ. ಸಹಾಯಕ ಕೃಷಿ ನಿರ್ದೇಶಕರು, ಬೇಲೂರು ಇವರು ಕೇಸ್ ಅನ್ನು ಅರೆಹಳ್ಳಿ ಪೋಲಿಸ್ ಠಾಣೆಯಲ್ಲಿ ದಾಖಲು ಮಾಡಿ ಶ್ರೀ ಜಯರಾಂ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಶ್ರೀ ಸತೀಶ್, ಲೆಕ್ಕ ಸಹಾಯಕರು, ಅನುಘಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇವರನ್ನು ದಸ್ತಗಿರಿ ಮಾಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕನಗುಪ್ಪರೈತರಾದ ಶ್ರೀ ಶಿವಶಂಕರಯ್ಯರನ್ನೂ ಸಹ ಪೊಲೀಸರು ಬಂಧನಕ್ಕೆ ತೆಗೆದುಕೊಂಡು ತನಿಖೆ ಮುಂದುವರೆಸಿದ್ದಾರೆ. ಅದೇ ರೀತಿ ಬೇಲೂರು ತಾಲ್ಲೂಕಿನಲ್ಲಿ ನಾವೋರ್ ಸಹಕಾರ ಸಂಘ ಅಲ್ಲಿಯೂ ಸಹ ನಕಲಿ ರಸಗೊಬ್ಬರ ಇದೆ ಎಂದು ಶಂಕೆ ಬಂದ ಮೇಲೆ ಅದರ ದಾಸ್ತಾನಿನಲ್ಲಿ ಸ್ವಲ್ಪ ಪರೀಕ್ಷೆಗೆ ನಾವು ಒಳಪಡಿಸುತ್ತಿದ್ದೇವೆ. ಅದೇ ರೀತಿ ಸಕಲೇಶಪುರ ತಾಲ್ಲೂಕು ಕೂಚಳ್ಳಿ ಟ್ರೇಡರ್ಸ್, ಯಸಲೂರು ಹೋಬಳಿ, ಚಂಡಿಗೇಹಳ್ಳಿ, ಗ್ರಾಮ ಇಲ್ಲಿಯೂ ಸಹ ದೂರು ಬಂದಿದ್ದು 269 ರಸಗೊಬ್ಬರ ಚೀಲಗಳನ್ನು ನಾವು ವಶಪಡಿಸಿಕೊಳ್ಳತಕ್ಕಂಥದ್ದನ್ನು ಮಾಡಿ, ಅದನ್ನು ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೇವೆ. ಎಲ್ಲಾ ಪ್ರಕರಣಗಳಲ್ಲಿ ಅನಧಿಕೃತ ವ್ಯಕ್ತಿಗಳಿಂದ ಇದೆಲ್ಲವೂ ಸಹ ಸರಬರಾಜು ಆಗಿರತಕ್ಕಂಥದ್ದು. ಅದಕ್ಕೆ ಸಂಬಂಧಪಟ್ಟ ಹಾಗೆ, invoice, bills ಇತ್ಯಾದಿ ಏನೇನಿದೆ, ಎಲ್ಲವೂ ಸಹ ಬೋಗಸ್ ಆಗಿರುತ್ತದೆ ಹಾಗಾಗಿ, ಅವುಗಳ ತನಿಖೆಯನ್ನು ನಾವು ತೀವ್ರವಾಗಿ ಮುಂದುವರಿಸುತ್ತಿದ್ದೇವೆ. ಅದೇ ರೀತಿ ದಾವಣಗೆರೆ ಜಿಲ್ಲೆಯಲ್ಲಿ ಅನಗೋಡು

ಹೋಬಳಿಯ ಸಿದ್ದನೂರು ಗ್ರಾಮದ ರೈತರಾದ ಎಸ್.ಎ. ಮಹೇಶ್ವರಯ್ಯ ಬಿನ್ ಸಂಗಪ್ಪ ರವರ ಹತ್ತಿರ ಅನಧಿಕೃತವಾಗಿ ಯಾವುದೇ ಮಾಹಿತಿ ಮುದ್ರಣವಿಲ್ಲದ ಬಿಳಿ ಪ್ಲಾಸ್ಟಿಕ್ ಚೀಲಗಳಲ್ಲಿ ಮೆಕ್ಕೆ ಜೋಳದ ಬೀಜವನ್ನು ಸುಮಾರು 50 ಕೆ.ಜಿ. ಯ 33 ಚೀಲ ಹಾಗೂ 25 ಕೆ.ಜಿ. ತೂಕದ 25 ಚೀಲಗಳು ಸಿಕ್ಕಿದೆ. ಅವರ ಮೇಲೆಯೂ ಸಹ ನಾವು ಕೇಸ್ ದಾಖಲು ಮಾಡಿ ಅವರ ಮೇಲೆಯೂ ಸಹ ಕ್ರಮ ಜರುಗಿಸುತ್ತಿದ್ದೇವೆ. ಇವತ್ತು ನಾನು ಹೇಳಿಕೆ ಮಾಡಲು ನಿಲ್ಲುವುದಕ್ಕೆ ಕಾರಣವೇನೆಂದರೆ, ನಾವು ಸದನಕ್ಕೆ ಸರ್ಕಾರದ ಪರವಾಗಿ ಭರವಸೆ ಕೊಟ್ಟಿದ್ದೆವು. ಇದು ಕೇವಲ ವಿತರಕರ ಮೇಲೆ ಮತ್ತು ಯಾರು ಮಾರಾಟ ಮಾಡುತ್ತಿದ್ದಾರೆ, ಅವರ ಮೇಲೆ ಮಾತ್ರ ನಾವು ಕಾನೂನು ಕ್ರಮ ಕೈಗೊಂಡು ಅಲ್ಲಿಗೇ ಬಿಡುವುದಿಲ್ಲ. ಇದರ ಮೂಲ ಯಾವುದು ಅದನ್ನು ಪತ್ತೆ ಮಾಡಬೇಕೆಂದು ತಾವೂ ಸೂಚನೆಯನ್ನು ಕೊಟ್ಟಿದ್ದಿರಿ. ಅದಕ್ಕಾಗಿ ತಮ್ಮ ಗಮನಕ್ಕೆ ನಾನು ತರಲಿಕ್ಕೆ ಬಯಸುತ್ತಿದ್ದ ವಿಚಾರವೇನೆಂದರೆ, ಈ ಪ್ರಕರಣದಲ್ಲಿ ಸುಮಾರು ಆರೇಳು ಜನಗಳನ್ನು ನಾವು ಬಂಧನಕ್ಕೆ ಒಳಪಡಿಸಿ ಅವರ ಮೇಲೆ ಕೇಸುಗಳನ್ನು ಹಾಕಿ ಅವರನ್ನು ವಿಚಾರಣೆಗೆ ಒಳಪಡಿಸಿದ ಮೇಲೆ ಕೊನೆಯದಾಗಿ ಇವೆಲ್ಲವೂ ಸಹ ತಮಿಳುನಾಡು ರಾಜ್ಯದ ವೆಲ್ಲೂರು ಜಿಲ್ಲೆಯ ವೇಣಿ ಅಂಬಾಡಿ ಗ್ರಾಮದಲ್ಲಿ ದೇವರಾಜು ಎನ್ನತಕ್ಕಂಥವರು ಅನಧಿಕೃತವಾಗಿ ತಯಾರು ಮಾಡುತ್ತಿದ್ದಾರೆ, ಅಲ್ಲಿಯ ಕಾರ್ಖಾನೆಗೂ ಸಹ ನಮ್ಮ ಹಾಸನ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ಮತ್ತು ನಮ್ಮ ಕೃಷಿ ಇಲಾಖೆಯ ಅಧಿಕಾರಿಗಳು ಹೋಗಿ ದೇವರಾಜು ಎನ್ನುವ ವ್ಯಕ್ತಿಯನ್ನು ಬಂಧನ ಮಾಡಿ ಆ ಕಾರ್ಖಾನೆಯನ್ನೂ ಸಹ ಬಂದ್ ಮಾಡಿಸಿ ಅವರನ್ನು ವಶಕ್ಕೆ ತೆಗೆದುಕೊಂಡ ಮೂಲ ಏನಿದೆ, ಆ ಮೂಲಕ್ಕೇ ಹೋಗಿ ಅದನ್ನು ಬಂದ್ ಮಾಡಿಸುವ ಕೆಲಸವನ್ನು ಮಾಡಿದ್ದೇವೆ. ಮೂಲವನ್ನು ಹುಡುಕುತ್ತೇವೆಂದು ಸದನಕ್ಕೆ ಏನು ಭರವಸೆ ಕೊಟ್ಟಿದ್ದೆವು, ಅದನ್ನು ಒಂದು ವಾರದ ಒಳಗಡೆ – ಈಡೇರಿಸಿದ್ದೇವೆಂದು ಹೇಳಲಿಕ್ಕೆ ಬಯಸುತ್ತಾ, ಹಾಸನ ಜಿಲ್ಲೆಯ ಪೊಲೀಸ್‌ನವರು ಸರಿಯಾಗಿ ತನಿಖೆ ಮಾಡುವುದಿಲ್ಲವೆಂದು ಶಂಕೆ ಬಂದಿತ್ತು. ಈಗ ಅವರ ಕೆಲಸವನ್ನು ನಾವು ಈ ಸದನದಲ್ಲಿ ಮೆಚ್ಚಲೇಬೇಕಾಗುತ್ತದೆ. ಒಂದೇ ವಾರದೊಳಗಡೆ ಮೂಲವನ್ನು ಹುಡುಕಿ ಅದನ್ನು ಬಂದ್ ಮಾಡತಕ್ಕಂಥ ಕೆಲಸವನ್ನು ಪೊಲೀಸ್ ಅಧಿಕಾರಿಗಳು, ಕೃಷಿ ಇಲಾಖೆಯವರು ಮಾಡಿದ್ದಾರೆ. ಅದನ್ನು ನಾನು ಗೌರವಪೂರ್ವಕವಾಗಿ ಸದನದ

ಗಮನಕ್ಕೆ ತರುವುದಕ್ಕೆ ಬಯಸುತ್ತಾ ಇನ್ನೊಂದು ವಿಷಯ ಕೃಷಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಅನೇಕ ಜನ ಪ್ರತಿನಿಧಿಗಳಿಂದ ದೂರು ಬರುತ್ತಿದೆ. ರಸಗೊಬ್ಬರ ಮಾರಾಟ ಮಾಡತಕ್ಕಂಥ ಸಂದರ್ಭದಲ್ಲಿ ಚೀಲಗಳ ಮೇಲಿರುವ ಗರಿಷ್ಠ ಮಾರಾಟ ದರ ಏನಿದೆ, ಅದಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟವಾಗುತ್ತಿದೆ ಎನ್ನುವ ವಿಚಾರವನ್ನು ನಮಗೆ ಅನೇಕ ಜನ ಪ್ರತಿನಿಧಿಗಳು ತೆಗೆದಕೊಂಡು ಬಂದಿದ್ದಾರೆ. ನಾವು ಈಗಾಗಲೇ ಮಾರುಕಟ್ಟೆ ಮಹಾಮಂಡಳಿಯವರನ್ನು ಕರೆಸಿ ಅವರಿಗೆ ಸ್ಪಷ್ಟವಾದ ನಿರ್ದೇಶನವನ್ನು ಕೊಟ್ಟಿದ್ದೇವೆ. ರಾಜ್ಯದಲ್ಲಿ ಖಾಸಗಿ ಅಂಗಡಿಗಳಲ್ಲಾಗಬಹುದು ಅಥವಾ ಯಾವುದೇ ಸಹಕಾರ ಸಂಘ ಆಗಬಹುದು, ಯಾವುದೇ ಸಂದರ್ಭದಲ್ಲಿ ಆ ಚೀಲದ ಮೇಲಿರುವ ಗರಿಷ್ಠ ಮಾರಾಟ ಬೆಲೆ ಏನಿದೆ, ಅದಕ್ಕಿಂತ ಹೆಚಿನ ಬೆಲೆಗೆ ಮಾರಾಟ ಮಾಡುವುದಕ್ಕೆ ಯಾವುದೇ ಕಾರಣಗಳಿಲ್ಲ, ಅಂಥ ಪ್ರಕರಣ ಎಲ್ಲಾದರೂ ನಡೆದರೆ ಅದನ್ನು ದಯವಿಟ್ಟು ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ, ಅವರ ಮೇಲೆ ನಾವು ಕಾನೂನು ಕ್ರಮ ಜರುಗಿಸುತ್ತೇವೆ, ಅವರು ಕೆಲವು ಕಡೆ ವಿತರಣಾ ವೆಚ್ಚವನ್ನು ಸೇರಿಸಿಕೊಂಡು ತೆಗೆದುಕೊಳ್ಳುತ್ತಿದ್ದೇವೆ ಎಂದು ಸಬೂಬುಗಳನ್ನು ಹೇಳುತ್ತಿದ್ದಾರೆ. ಆ ವಿತರಣಾ ವೆಚ್ಚ ಏನಿದೆ, ಏನಿದೆ, ಅದನ್ನು ಅವಶ್ಯಕತೆ ಬಂದರೆ ಸರ್ಕಾರವೇ ಭರಿಸುತ್ತದೆಯೇ ಹೊರತು ರೈತರ ಮೇಲೆ ಹಾಕಲಿಕ್ಕೆ ನಾವು ತಯಾರಿಲ್ಲ. ಯಾವುದೇ ಕಾರಣಕ್ಕೂ ರಾಜ್ಯದ ಯಾವುದೇ ಮೂಲೆಯಲ್ಲಾಗಲಿ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿಗೆ ಯಾರೂ ರೈತರು ಕೊಂಡುಕೊಳ್ಳಬಾರದು. ಅಂಥ ಪ್ರಕರಣ ಎಲ್ಲಾದರೂ ನಡೆದರೆ ಅದನ್ನು ನಮ್ಮ ಗಮನಕ್ಕೆ ತರಬೇಕೆಂತಲೂ ತಮ್ಮ ಮುಖಾಂತರ ನಾನು ಎಲ್ಲಾ ಸದಸ್ಯರಿಗೆ ಮನವಿ ಮಾಡಲಿಕ್ಕೆ ಬಯಸುತ್ತೇನೆ. ಇವತ್ತು ನಾವು ತಮಿಳುನಾಡಿನಲ್ಲಿ ಏನು ಕ್ರಮ ಕೈಗೊಂಡಿದ್ದೇವೆ, ಇನ್ನೂ ಮುಂದುವರೆದು ಅವರು ಉನ್ನತ ಮಟ್ಟದಲ್ಲಿ ಇಲಾಖೆ ಜೊತೆಗೆ ಏನಾದರೂ ಮಾತನಾಡಬೇಕಾದರೆ ಅದನ್ನೂ ಸಹ ಮಾತನಾಡಿ ಆ ಕಾರ್ಖಾನೆ ಶಾಶ್ವತವಾಗಿ ಬಂದ್ ಆಗುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ. ಇದು ಇಲ್ಲಿಗೇ ಕೊನೆಯಾಗುತ್ತಯದೆ ಎಂದು ನಾವು ತಿಳಿದುಕೊಂಡಿಲ್ಲ. ಒಂದು ಪ್ರಕರಣದಲ್ಲಿ ನಾವು ಮೂಲಕ್ಕೆ ಹೋಗಿದ್ದೇವೆ. ಇನ್ನೂ ಬೇರೆ ಇಂಥ ಪ್ರಕರಣಗಳು ಎಲ್ಲಾದರೂ ನಡೆಯುತ್ತವೆಯೇ ಎಂದು ನಾವು ಇವತ್ತಿಗೂ ಸಹ ಜಾಗ್ರತರಾಗಿದ್ದೇವೆಂದು ನಾನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಧನ್ಯವಾದಗಳು.